ಹತ್ತಿ-ಆಲೂರು, ನಡಿಗುಡಿಕೇತ್ರ, ಯಲ್ಲಾಪುರ್, ಪಚಪುರ್, ಗೊಡಗೇರಿ, ಹೊಸಪೇಟ್, ರಾಕ್ಸಿ ಮದುಮಕ್ಕನಾಳ, ಶಿರಜಾನ್, ಜಂಗತಿಹಾಳ್, ರಾಮನಕಟ್ಟಿ, ನೋಗಿನಾಳ್, ವಾಡಿಶಿಡ್ಲಿಹಾಳ್ ಕದಹಚ್ಚಿ, ಕರಗುಪ್ಪಿ, ಮನಗಾವನ್,ಬೆನ್ನಿವಾಡ್, ಶಿಡ್ಲಿಹಾಳ್, ಶಿರಹಟ್ಟಿಮಿರ್ದ್ದಿ, ಶೋಲಾಪುರ್ ಶಿರಗಾಂವ, ಕೋಟಬಾಗಿ, ಶಿರಹಟ್ಟಿ ಬಿ.ಕೆ., ಗುಡಾಸ್, ಜಬಪುರ್, ಬೆಳವಾಯ್ ಹಂದಿಗೂಡ್,ಗವನಾಳ, ಹರಗಪುರ್, ಶೇಕಿನಹೊಸೂರ್, ಹಂಚಿನಾಳ್, ಹೊನ್ನಿಹಾಳ್, ಕೇ ಸಿ-ಅಕ್ಕಿವತ್, ಆಲೂರ್, ಬೋರ್ಗಲ್, ಭೈರಾಪುರ್, ಹಿಟ್ಟಿನಿ, ಕೋಣನಕೇರಿ, ಹದಲಗಿ, ರಾಸಿಂಗ್ ನಾಗನೂರ್ ಕೆ.ಎಸ್. ಶಿಪ್ಪೂರ್, ಬುಗಾಟೆ ಆಲೂರ್ ಮತ್ತು ಚಿಕ್ಕಲ್‌ಗೂಡ್ .

ತುಂಡು ಭೂಮಿ ಕಾಯ್ದೆಯಡಿ ಈ ಹಿಂದೆ ಬ್ಲಾಕುಗಳಾಗಿ ಪರಿವರ್ತನೆ ಮಾಡಿರುವುದನ್ನು ರದ್ದುಪಡಿಸುವ ಪ್ರಶ್ನೆ ಉದ್ಭವಿಸುವುದಿಲ್ಲ.

ವಿಷಯ : - ಬಗರ್ ಹುಕುಂ ಸಾಗುವಳಿ ಜಮೀನಿನ ವಿಸ್ತೀರ್ಣ ಕುರಿತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 372(341)

ಶ್ರೀ ಉಮೇಶ ನಿ. ಕತ್ತಿ (ಹುಕ್ಕೇರಿ ಪೂರ್ವಭಾಗ)

ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಹುಕ್ಕೇರಿ ತಾಲ್ಲೂಕಿನಲ್ಲಿ ಬಗರ್ ಹುಕುಂ ಸಾಗುವಳಿ ಸಮಿತಿ ವತಿಯಿಂದ ಮಂಜೂರಾದ ಜಮೀನಿನ ವಿಸ್ತೀರ್ಣ ಎಷ್ಟು?

ಆ) ಇದರಿಂದ ಪ್ರಯೋಜನ ಪಡೆದ ಫಲಾನುಭವಿಗಳೆಷ್ಟು?(ವಿವರ ಒದಗಿಸುವುದು)

ಶ್ರೀ ಎಂ ರಾಜಶೇಖರಮೂರ್ತಿ (ಕಂದಾಯ ಸಚಿವರು)

ಇಲ್ಲ

ಉದ್ಭವಿಸುವುದಿಲ್ಲ.

ವಿಷಯ : - ಆರಾಧನಾ ಯೋಜನೆಯ ಅನುಷ್ಠಾನ ಕುರಿತು

ಚುಕ್ಕೆ ರಹಿತ ಪ್ರಶ್ನೆ ಸಂಖ್ಯೆ 373(340)

ಶ್ರೀ ಉಮೇಶ್ ವಿ. ಕತ್ತಿ (ಹುಕ್ಕೇರಿ)

ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಹುಕ್ಕೇರಿ ತಾಲ್ಲೂಕಿನಲ್ಲಿ ಆರಾಧನಾ ಯೋಜನೆಯಡಿಯಲ್ಲಿ ಕಟ್ಟಲಾದ ಗುಡಿಗಳು ಎಷ್ಟು?

ಆ) ಯಾವಯಾವ ವರ್ಷದಲ್ಲಿ ಯಾವಯಾವ ಹಳ್ಳಿಗಳಲ್ಲಿ ಗುಡಿಗಳನ್ನು ಕಟ್ಟಲಾಯಿತು?

ಇ) ಅಪೂರ್ಣಗೊಂಡ ಗುಡಿಗಳನ್ನು ಯಾವಾಗ ಪೂರ್ಣಗೊಳಿಸಲಾಗುವುದು?

ಶ್ರೀ ಎಂ. ರಾಜಶೇಖರಮೂರ್ತಿ (ಕಂದಾಯ ಸಚಿವರು)

ಹೊಸದಾಗಿ ಗುಡಿಗಳನ್ನು ಕಟ್ಟಿಸಲಾಗಿಲ್ಲ. ಆದರೆ 17 ಗುಡಿಗಳನ್ನು ದುರಸ್ತಿ ಮಾಡಲಾಗಿದೆ.

ಮೇಲಿನ 'ಅ' ಪ್ರಶ್ನೆಗೆ ನೀಡಿದ ಉತ್ತರದಿಂದ ಈ ಪ್ರಶ್ನೆಗಳು ಉದ್ಭವಿಸುವುದಿಲ್ಲ.

ವಿಷಯ : - ಚಿಕ್ಕ ಮತ್ತು ಅತಿಚಿಕ್ಕ ಹಿಡುವಳಿದಾರರ ಅಂಕಿಸಂಖ್ಯೆ ಕುರಿತು

ಚುಕ್ಕೆ ರಹಿತ ಪ್ರಶ್ನೆ ಸಂಖ್ಯೆ 374(339)

ಶ್ರೀ ಉಮೇಶ.ವಿ. ಕತ್ತಿ (ಹುಕ್ಕೇರಿ)